# UNIVERSITY OF MYSORE *Alumni Association*®

E-4, Professors' Quarters
opp. Fire Brigade, Saraswathipuram
Mysore – 570 009, INDIA

Mobile: 8123087119
Website: www.umaa.in
Email: secretaryumaa2018@gmail.com

## One – day Workshop



On 3rd July 2023 a One day Workshop on 'Skill Development' was organized by UMAA to the students of Maharani's Commerce and Management College for Women, in association with Rank Book Learning and Software Solutions Pvt. Ltd. The programme was inaugurated by Prof. S.N. Hegde, President, UMAA and Former Vice Chancellor of University of Mysore. The programme was presided over by Prof. Somanna, Principal, Maharani's Commerce and Management College for Women. Prof. K.S. Rangappa, Vice President UMAA and Former Vice Chancellor of Karnataka State Open University and University of Mysore and Prof. S.N. Ramegowda, Former Vice Chancellor of Karnataka State Open University participated as Guests of Honor during the occasion.

For University of Mysore Alumni Association (UMAA) (R)

President

Under the Joint Auspices of

**UNIVERSITY OF MYSORE ALUMNI ASSOCIATION®**

in association with

**MAHARANI'S WOMEN'S COMMERCE AND MANAGEMENT COLLEGE**

and

**RANKBOOK LEARNING AND SOFTWARE SOLUTIONS PVT LTD**

Inagruation of

# Workshop on Skill Development

## TOPIC : COMMUNICATIVE ENGLISH & RESUME WRITING

Inagruation by

Prof. S. N. Hegde

President UMAA, Mysuru, Former Vice Chancellor - University of Mysuru

Guest of honour

Prof. K.S. Rangappa

Vice President UMAA, Former Vice Chancellor - KSOU and University of Mysuru

Prof. S. N. Ramegowda

Former Vice Chancellor - KSOU

Presided by

Prof. Somanna

Principal, Maharani's Women's Commerce & Management College, Mysuru

Date : 03-07-2023, Monday
Time : 11-30 AM
Venue: Auditorium, Maharani's Women's Commerce and Management College, Mysuru

Prof. S. Srikantaswamy
Seceretary, UMAA
and
Executive Members, UMAA

**University of Mysore Alumni Association (UMAA)**
**RankBook Learning & Software Solutions Pvt Ltd.**

ಅಪರ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಡಿಸಿಎಂ ಆಪ್ತ ಕಾರ್ಯದರ್ಶಿ ಡಾ.ರಾಜೇಂದ್ರ ಪ್ರಸಾದ್ ಮತ್ತಿತರರು ಭಾಗವಹಿಸಿದ್ದರು. | ಕಾಲೇಜು, ಭಾವನಾ ಮಾರ್ಬಲ್ ರಸ್ತೆ, | ಸೆಸ್ಕ್ ಪ್ರಕಟಣೆ ತಿಳಿಸಿದೆ.

# ಭಾರತೀಯರಲ್ಲಿ ಬೌದ್ಧಿಕ ಸಾಮರ್ಥ್ಯ ಹೆಚ್ಚಾಗಿದೆ: ಪ್ರೊ.ಕೆ.ಎಸ್.ರಂಗಪ್ಪ



ಮೈಸೂರು,ಜು.3(ಎಂಟಿವೈ)– ವಿಶ್ವದ ಇತರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಬೌದ್ಧಿಕ ಸಾಮರ್ಥ್ಯ (ಐಕ್ಯೂ) ಉತ್ತಮ ಸ್ಥಾನದಲ್ಲಿದೆ ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್ ರಂಗಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಆಯೋಜಿಸಿದ್ದ ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರದಲ್ಲಿ ಮಾತನಾಡಿದರು.

ವಿಶ್ವದ ಬಹುತೇಕ ದೇಶಗಳಲ್ಲಿ ಭಾರತೀಯ ಮೂಲದ ವಿಜ್ಞಾನಿಗಳೇ ಹೆಚ್ಚಾಗಿದ್ದಾರೆ. ಯಾವುದೇ ಒಂದು ದೇಶ ಪ್ರಖ್ಯಾತಿಯಾಗಬೇಕಾದರೆ ಅಲ್ಲಿನ ವಿಜ್ಞಾನಿಗಳು, ಇಂಜಿನಿಯರ್‌ಗಳ ಸಾಧನೆ ಹೆಚ್ಚಾಗಿರುತ್ತದೆ. ಕೌಶಲ್ಯ ಪಡೆದುಕೊಳ್ಳುವುದು ಇಂದಿನ ಜಾಗತೀಕ ಮತ್ತು ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲರಿಗೂ ಅತ್ಯವಶ್ಯಕ. ಯಾರಲ್ಲಿ ಅಪಾರವಾದ ಕೌಶಲ್ಯಗಳಿರುತ್ತವೆಯೂ ಅವರು ಮಾತ್ರ ಪ್ರಪಂಚದ ಯಾವುದೇ ದೇಶದಲ್ಲಿ ಬೇಕಾದರೂ ತಮ್ಮ ಭವಿಷ್ಯ ರೂಪಿಸಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ. ಜಾಗತಿಕ ಮಟ್ಟದಲ್ಲಿ ಆಲೋಚನೆ ಮಾಡಿದಾಗ ಮಾತ್ರ ಇಂದಿನ ಕಾಲದಲ್ಲಿ ಮುಂದೆ ಬರಲು ಸಾಧ್ಯ ಎಂದು ಹೇಳಿದರು.

ಇಂಗ್ಲಿಷ್ ಭಾಷೆಗೆ ಜಾಗತಿಕ ಮನ್ನಣೆ ಇರುವುದರಿಂದ ಬಹುತೇಕರು ಆ ಭಾಷೆ ಕಲಿಯಲು ಬಯಸುತ್ತಾರೆ. ಕಲಿಕೆಗೆ ಯಾವುದೇ ರೀತಿಯ ತಾರತಮ್ಯ ಇರುವುದಿಲ್ಲ. ನಾವು ಪಿಯುಸಿಯನ್ನು ಕನ್ನಡ ಭಾಷೆಯಲ್ಲಿ ಕಲಿಯುವುದರಿಂದ ಬಿಎಸ್‌ಸಿ ಇಂಗ್ಲಿಷ್ ಮಾಧ್ಯಮಕ್ಕೆ ಪ್ರವೇಶವೇ ಸಿಗುವುದಿಲ್ಲ. ಸರ್ಕಾರಿ ಶಾಲೆಗಳಲ್ಲೂ ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಇಂಗ್ಲಿಷ್ ಕಲಿಸುತ್ತಿರುವುದು ಉತ್ತಮ ಬೆಳವಣಿಗೆ. ಇದರಿಂದ ಮುಂದಿನ ದಿನಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವವರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದರು.

ಇದುವರೆಗೂ ನೋಬೆಲ್ ಪ್ರಶಸ್ತಿ ಪಡೆದವರಲ್ಲಿ ಬಹುತೇಕರು ಭಾಷಾ ಸಮಸ್ಯೆಗಳನ್ನು ಎದುರಿಸಿದವರಾಗಿದ್ದಾರೆ. ಆದರೆ, ಅವರ ಸಾಧನೆಗೆ ಭಾಷೆ ಎಂದೂ ತೊಡಕಾಗಲಿಲ್ಲ. ಇಂತಹ ನೂರಾರು ಸಮಸ್ಯೆಗಳ ನಡುವೆಯೂ ಜಗತ್ತು ಮೆಚ್ಚುವಂತ ಸಾಧನೆ ಮಾಡಿದ್ದಾರೆ. ಅಂತಹವರನ್ನು ಇಂದಿನ ಯುವ ಪೀಳಿಗೆ ಮಾದರಿಯಾಗಿ ಸ್ವೀಕರಿಸಬೇಕು. ಇಂಗ್ಲಿಷ್ ಜೊತೆಗೆ ಕಂಪ್ಯೂಟರ್ ಹಾಗೂ ಇನ್ನಿತರ ಕೌಶಲ್ಯಭರಿತ ಶಿಕ್ಷಣ ಪಡೆದುಕೊಳ್ಳಲು ವಿದ್ಯಾರ್ಥಿಗಳು ಮುಂದಾಗಬೇಕು. ಮಹಿಳೆಯರ ಶಿಕ್ಷಣಕ್ಕೆ ಸರ್ಕಾರ ಸಾಕಷ್ಟು ಅನುದಾನ ನೀಡುತ್ತಿವೆ. ಅದನ್ನು ಬಳಸಿಕೊಂಡು ಉದ್ಯೋಗಸ್ಥರಾಗಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿ ಪ್ರೊ.ಎಸ್.ಎನ್ ಹೆಗ್ಡೆ ಮಾತನಾಡಿ, ಓದಿನ ಜೊತೆಗೆ ಒಂದಷ್ಟು ಕೌಶಲ್ಯಗಳನ್ನು ಮೈಗೂಡಿಸಿಕೊಂಡರೆ ಯಾರೂ ನಿರುದ್ಯೋಗಿಗಳಾಗಿ ಉಳಿಯಲು ಸಾಧ್ಯವಿಲ್ಲ. ಸಾಕಷ್ಟು ಕಂಪನಿಗಳು ದೇಶದತ್ತ ಮುಖ ಮಾಡುತ್ತಿವೆ. ಉದ್ಯೋಗ ಅವಕಾಶಗಳೂ ಹೆಚ್ಚಿವೆ. ಆದ್ದರಿಂದ ವಿದ್ಯಾರ್ಥಿಗಳು ಕೌಶಲ್ಯ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಮಹಾರಾಣಿ ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ ಪ್ರೊ. ಸೋಮಣ್ಣ, ನಿವೃತ್ತ ಕುಲಪತಿ ಎಸ್.ಎನ್. ರಾಮೇಗೌಡ, ಪ್ರೊ.ಎಸ್.ಶ್ರೀಕಂಠಸ್ವಾಮಿ, ಸ್ವಾಸ್ಥ್ಯ ಹಾಗೂ ಆಹಾರ ತಜ್ಞೆ ನಂದಿನಿ ಮೂರ್ತಿ ಹಾಗೂ ಇತರರು ಉಪಸ್ಥಿತರಿದ್ದರು.

## ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಕಿವಿಮಾತು

# ಕೌಶಲಾಧಾರಿತ ಶಿಕ್ಷಣ ಪಡೆಯಿರಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಇಂಗ್ಲಿಷ್ ಜತೆಗೆ ಕಂಪ್ಯೂಟರ್, ಕೌಶಲಾಧಾರಿತ ಶಿಕ್ಷಣ ಪಡೆಯಬೇಕು ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಮಹಾರಾಣಿ ಮಹಿಳಾ .ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ೋಮವಾರ ಆಯೋಜಿಸಿದ್ದ ಕೌಶಲಾಭಿವೃದ್ಧಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಕೌಶಲ ಎಂಬುದು ಈಗಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲರಿಗೂ ಅಗತ್ಯವಾಗಿದೆ. ಶಲ ಇರುವ ವ್ಯಕ್ತಿಗಳು ಪ್ರಪಂಚದ ಯಾವುದೇ ದೇಶದಲ್ಲಿ ಬೇಕಾದರೂ ಉತ್ತಮ ವಿಷ್ಯ ರೂಪಿಸಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ. ಜಾಗತಿಕ ಮಟ್ಟದಲ್ಲಿ ಲೋಚಿಸಿದಾಗ ಮಾತ್ರ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸು ಗಳಿಸಲು ಾಧ್ಯವಾಗುತ್ತದೆ ಎಂದರು.

ಆಂಗ್ಲ ಭಾಷೆಗೆ ಜಾಗತಿಕ ಮನ್ನಣೆ ಇರುವುದರಿಂದ ಬಹುತೇಕರು ಆ ಭಾಷೆ ಲಿಯಲು ಆಸಕ್ತಿ ತೋರುತ್ತಾರೆ. ಆದರೆ ಕಲಿಕೆಗೆ ಯಾವುದೇ ರೀತಿಯ ಭಾಷಾ ಾರತಮ್ಯ ಇಲ್ಲ. ಸಾಧನೆಗೂ ಸಹ ಭಾಷೆ ಎಂದೂ ತೊಡಕಾಗಲ್ಲ. ಸರ್ಕಾರಿ ಾಲೆಗಳಲ್ಲಿ ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಇಂಗ್ಲಿಷ್ ಕಲಿಸುತ್ತಿರುವುದು ಉತ್ತಮ ೆಳವಣಿಗೆ ಎಂದು ಹೇಳಿದರು.

ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಸಾಕಷ್ಟು ಅನುದಾನ ನೀಡುತ್ತಿವೆ. ಅದನ್ನು ಳಸಿಕೊಂಡು ಉದ್ಯೋಗಸ್ಥರಾಗಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ.ಎಸ್.ಎನ್. ಹೆಗ್ಡೆ ಾತನಾಡಿ, ಓದಿನ ಜತೆಗೆ ಒಂದಷ್ಟು ಕೌಶಲವನ್ನು ಮೈಗೂಡಿಸಿಕೊಂಡರೆ ಯಾರೂ



**ನಗರದಲ್ಲಿ ಸೋಮವಾರ ಆಯೋಜಿಸಿದ್ದ ಕೌಶಲಾಭಿವೃದ್ಧಿ ಕಾರ್ಯಾಗಾರವನ್ನು ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಎಸ್.ರಂಗಪ್ಪ, ಪ್ರೊ.ಎಸ್.ಎನ್.ಹೆಗ್ಡೆ ಉದ್ಘಾಟಿಸಿದರು. ಪ್ರೊ.ಸೋಮಣ್ಣ, ಎಸ್.ಎನ್.ರಾಮೇಗೌಡ, ಪ್ರೊ.ಎಸ್. ಶ್ರೀಕಂಠಸ್ವಾಮಿ ಇತರರು ಇದ್ದರು.**

ನಿರುದ್ಯೋಗಿಯಾಗಿ ಉಳಿಯಲು ಸಾಧ್ಯವಿಲ್ಲ. ವಿದೇಶದ ಸಾಕಷ್ಟು ಕಂಪನಿಗಳು ಭಾರತದತ್ತ ಮುಖ ಮಾಡುತ್ತಿವೆ. ಉದ್ಯೋಗ ಅವಕಾಶಗಳೂ ವೃದ್ಧಿಯಾಗಿವೆ. ಇದನ್ನು ಬಳಕೆ ಮಾಡಿಕೊಳ್ಳಲು ವಿದ್ಯಾರ್ಥಿಗಳು ಕೌಶಲ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು. ಪ್ರಾಂಶುಪಾಲ ಪ್ರೊ.ಸೋಮಣ್ಣ, ನಿವೃತ್ತ ಕುಲಪತಿ ಎಸ್.ಎನ್. ರಾಮೇಗೌಡ, ಪ್ರೊ.ಎಸ್.ಶ್ರೀಕಂಠಸ್ವಾಮಿ ಇತರರು ಇದ್ದರು.